ದಿನಗೂಲಿ ಕೆಲಸಗಾರರು ಹಾಗೂ ಹುಡುಗರಿಂದ ನಡೆಯುತ್ತಿರುವ ಸಣ್ಣಪ್ರಮಾಣದ ಕಳ್ಳ ತನಗಳನ್ನು (ಅಂದರೆ ರೂ.೬ ರಿಂದ ೧೫೦ರವರೆಗೆ) ಕರ್ನಾಟಕ ಪೋಲೀಸ್ ಕಾಯಿದೆಯ ಅನ್ವಯ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದ್ದು ಇಂತಹ ಕಳ್ಳತನಗಳನ್ನು ನಿಯಂತ್ರಿಸಲಾಗಿದೆ.

ಈಗಿರುವ ವ್ಯವಸ್ಥೆಯನ್ನು ಆಗಿಂದಾಗ್ಗೆ ವಿಮರ್ಶಿಸಿ ಹೆಚ್ಚಿನ ಸಿಬ್ಬಂದಿ ಅವಶ್ಯಕತೆ ಕಂಡು ಬಂದರೆ ಸೂಕ್ತ ವ್ಯವಸ್ಥೆ ಮಾಡಲಾಗುವುದು.

೯) ಉಳ್ಳಾಲದಲ್ಲಿರುವ ಪ್ರವಾಸೋದ್ಯಮ ಕೇಂದ್ರವನ್ನು ಸ್ಥಾಪಿಸುವುದು.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಉಳ್ಳಾಲ ಸಮುದ್ರ ಕಿನಾರೆಯಲ್ಲಿದೆ. ಪ್ರಕೃತಿ ಸೌಂದರ್ಯದ ತವರೂರು ಉಳ್ಳಾಲ. ಒಂದು ಬದಿಯಿಂದ ಕಡಲಿನ ತೆರೆಗಳು ಸುಳಿ ಸುಳಿಯಾಗಿ ದಂಡೆಗೆ ಬಡಿಯುವ ದೃಶ್ಯ. ಮತ್ತೊಂದು ಬದಿಯಲ್ಲಿ ತೆಂಗಿನ ಮರಗಳ ಹಸಿರು ಸುಂದರ ರಮಣೀಯ ದೃಶ್ಯ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಪೋರ್ಚುಗೀಸರ ವಿರುದ್ಧ ಹೋರಾಡಿದ ರಾಣಿ ಅಬ್ಬಕ್ಕ ರಾಣಿ ವಾಸವಾಗಿದ್ದ ತಾಣ ಇದು. ಅಲ್ಲದೆ ಭಾರತದ ಪ್ರಖ್ಯಾತವಾದ ಐದು ದರ್ಗಾ ಗಳಲ್ಲಿ ಒಂದಾದ ಸೈಯದ್ ಮದನಿ ಶರೀಪ್ ದರ್ಗಾ ಉಳ್ಳಾಲದಲ್ಲಿದೆ, ಹತ್ತಿರದಲ್ಲೇ ಪ್ರಖ್ಯಾತ ಸೋಮೇಶ್ವರ ದೇವಸ್ಥಾನ ಇದೆ, ಇಲ್ಲಿಗೆ ಪ್ರವಾಸಿಗಳು ಸದಾ ಬರುತ್ತಿದ್ದಾರೆ. ಆದರೆ ಇಲ್ಲೊಂದು ಪ್ರವಾಸೋದ್ಯಮ ತಾಣ ಇರ ವುದಿಲ್ಲ, ಹಿಂದೊಮ್ಮೆ ಉಳ್ಳಾಲದಲ್ಲಿ ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಲು ಪ್ರಾತುಕತೆಯಾಗಿತ್ತು. ಆದರೆ ಅದು ಇನ್ನೂ ಯಾವುದೇ ರೂಪ ತಾಳಿಲ್ಲ. ಹಿಂದೊಮ್ಮೆ ಇದೇ ಸದನದಲ್ಲಿ ಉಳ್ಳಾಲದಲ್ಲಿ ಪ್ರವಾಸೋದ್ಯಮ ತಾಣ ಮಾಡಲಾಗುವುದೆಂದು ತಿಳಿಸಲಾಗತ್ತು. ಆದಕಾರಣ ಇಂತಹ ಸುಂದರ ಪ್ರವಾಸಿಗಳ ತಾಣವಾದ ಉಳ್ಳಾಲದಲ್ಲಿ ಒಂದು ಪ್ರವಾಸೋದ್ಯಮ ನೆಲೆಯನ್ನು ಸ್ಥಾಪಿಸಿ ಬರತಕ್ಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವಂತಾದ್ದು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ಪ್ರವಾಸೋದ್ಯಮ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಸದಸ್ಯರಿಗೆ ಉತ್ತರ ತರಿಸಿ ಕೊಡುತ್ತೇನೆ.

೧೦) ರೈತರಿಗೆ ಹಳ್ಳಿಗಳಲ್ಲಿ ಮೇವು ದಾಸ್ತಾನು. ಗೊಬ್ಬರದ ತಿಪ್ಪೆಗಳಿಗೆ ಗ್ರಾಮ ನೈರ್ಮಲ್ಯದ ದೃಷ್ಟಿಯಿಂದ ವ್ಯವಸ್ಥಿತ ಜಾಗವನ್ನು ಕಾದಿರಿಸುವುದು.

ಶ್ರೀ ಆರ್ ರಾಮಯ್ಯ.—ಮಾನ್ಯ ಅಧ್ಯಕ್ಷರೇ ಹಳ್ಳಿಗಾಡಿನಲ್ಲಿ ರೈತರು ತಾವು ಅವಲಂಬಿಸಿರುವ ದನಕರುಗಳನ್ನು ಪೋಷಿಸಲು ಅವರುಗಳ ಮನೆಯ ಬಳಿಯೇ ದನದ ಕೊಟ್ಟಿಗೆಯನ್ನು ನಿರ್ಮಾಣ ಮಾಡಿ ಕೊಂಡಿರುವರು ಆದರೆ ಇವುಗಳಿಗೆ ಬೇಕಾದ ಮೇವನ್ನು ದಾಸ್ತಾನು ಮಾಡಲು ಊರ ಬದಿಯಲ್ಲೇ ಕಣಗಳನ್ನು ನಿರ್ಮಿಸಿಕೊಂಡಿರುತ್ತಾರೆ. ಹಾಗೆಯೇ ಅವುಗಳ ಗೊಬ್ಬರದ ತಿಪ್ಪೆಗಳನ್ನು ಸಹ ಹಾಕಿ ಕೊಂಡಿರುತ್ತಾರೆ. ಆದರೆ ಈ ಎರಡು ವ್ಯವಸ್ಥೆಗಳು ಅಗತ್ಯವಾಗಿದ್ದರೂ ಗ್ರಾಮ ನೈರ್ಮಲ್ಯದ ದೃಷ್ಟಿ ಯಿಂದ ಹಾಗೂ ಸಿವೇಶನಗಳನ್ನು ಕೊಡುವಾಗ ಉದ್ಭವಿಸುವ ಸಮಸ್ಯೆಗೆ ಪರಿಹಾರವಾಗಿ ಸರ್ಕಾರ ಏನಾದರೂ ಈ ಎರಡು ವ್ಯವಸ್ಥಿತ ಜಾಗವನ್ನು ಕಾದಿರಿಸಲು ವ್ಯವಸ್ಥೆ ಮಾಡುವುದೇ ?

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಉತ್ತರ ತರಿಸಿ ಕೊಡುತ್ತೇನೆ.

೧) ಸಂಳ್ಯ ತಾಲ್ಲೂಕು ಕೇನ್ಯ ಗ್ರಾಮದ ಶ್ರೀಮತಿ ವಾಸಮ್ಮ ಎನ್ನುವವರಿಗೆ ಮಂಡಲ ಪಂಚಾಯಿತಿ ಸದಸ್ಯರೊಬ್ಬರು ಕಿರುಕಳ ಕೊಡುತ್ತಿರುವುದು.

ಶ್ರೀ ಕೆ ಕುಶಾಲ —ಮಾನ್ಯ ಅಧ್ಯಕ್ಷರೇ ಸುಳ್ಯ ತಾಲ್ಲೂಕಿನ ಕೇನ್ಯ ಗ್ರಾಮದಲ್ಲಿ ಶ್ರೀಮತಿ ವಾಸಮ್ಮ ಎಂಬ ಹಿಂದುಳಿದ ವರ್ಗದ ವಿಧವೆ ಎಸ್ ಸಿ.ಆರ್ ಸಿ.ಆರ್. ಕೆ.ಕೆ:೮೭:೮೮ರರಂತೆ ಸ. ನಂಬ್ರ ೧೧೨–೨೯ಲ್ಲಿ ೧–೦೬ ಎಕ್ರೆ ಜಮೀನು ರಿಕಾರ್ಡ್ ಆಗಿ ಸರಕಾರಕ್ಕೆ ಫೀಜು ಮಗೈರೆ ಪಾವತಿ ಮಾಡಿರುತ್ತಾರೆ. ಸದ್ರಿ ಜಮೀನು ಅಂದಿನಿ ದ ಈಗಲೂ ತಮ್ಮ ಸ್ವಾಧೀನ ಅನುಭವದಲ್ಲಿದು